ಮೇಲಿಳಿದು ಬಂದಿದ್ದ ಮುಂಗುರುಳನ್ನು ಒತ್ತರಿಸಿದಾಗ ಅವಳು ಮುದ್ದಾಗಿ ನಕ್ಕಳು. ಸಂತೋಷನ ಒಂದು ಸ್ಪರ್ಶಕ್ಕೆ ಅವಳ ಮೈಯ ನರಗಳೆಲ್ಲ ವೀಣೆಯ ತಂತಿಯಂತೆ ಝೇಂಕರಿಸುತ್ತವೆ.

ಟೀ ಕುಡಿದು ಬಂದರು. ಕಾರು ಊರುಬಿಟ್ಟು ದೂರ ಸರಿಯುತ್ತಿತ್ತು. ಮುಚ್ಚಂಜೆಯ ಕೆಂಪು, ಮೋಡಗಳಿಗೆ ಬಣ್ಣ ಬಳಿಯುತ್ತಿತ್ತು. ಹಿತವಾಗಿ ತೀಡಿಬರುವ ತಂಗಾಳಿಗೆ, ಅವಳು ಹಾಗೇ ಅವನ ಭುಜಕ್ಕೊರಗಿ ಕಣ್ಣು ಮುಚ್ಚಿದಳು. ಅವನಿಗೆ ಸ್ಟೀಯರಿಂಗ್ ವ್ಹೀಲ್ ತಿರುಗಿಸುವುದು ಕಷ್ಟವಾಯಿತು. ಅವಳ ತಲೆಯನ್ನು ಚುಂಬಿಸಿ ಅವಳಿಗೆ ಸರಿಯಾಗಿ ಕುಳಿತುಕೊಳ್ಳಲು ಹೇಳಿದ. ಅವಳು 'ಊಂ.... ಊಂ.... ಎನ್ನುತ್ತ ನಿದ್ದೆತೂಗುವ ಕಣ್ಣುಗಳನ್ನು ತೆರೆಯದಿದ್ದಾಗ ಅವನು ಕಾರು ನಿಲ್ಲಿಸಿದ. ಕಾರು ನಿಂತ ಶಬ್ದಕ್ಕೆ ಅವಳ ಮಂಪರು ಹರಿಯಿತು. ಕಣ್ಣು ಹೊಸಕಿಕೊಳ್ಳುತ್ತಾ.

'ಎಲ್ಲಿಗೆ ತಂದ್ರೀ ನನ್ನ ಸಂತೋಷ್?' ಎಂದಳು.

'ನದಿ ದಂಡೆಯ ಶಿವಾಲಯಕ್ಕೆ ಹೋಗಬೇಕೆಂದು ಬಂದರೆ ನೀವು ನಿದ್ರೆ ಮಾಡಿಬಿಟ್ಟರಿ. ನಡುದಾರಿಯಲ್ಲಿ ನಿಂತಿದ್ದೇವೆ, ಏಕೆ, ಗಾಬರಿಯಾದ್ರಾ? ನಾನೇನು ನಿಮ್ಮನ್ನು ಕಿಡ್‌ನ್ಯಾಪ್ ಮಾಡಿಕೊಂಡು ಹೋಗಲಿಲ್ಲವಲ್ಲ...' ಎನ್ನುತ್ತ ನಕ್ಕ.

'ಹಾಗೆ ಕಿಡ್‌ನ್ಯಾಪ್ ಮಾಡಿದರೂ ವಿರೋಧಿಸುವವರಿಲ್ಲ...'

'ಹೌದೆ ಕವಿತಾ?' ಅಚ್ಚರಿ ಸಂತಸಗಳ ಸಾವಿರ ಮೆಟ್ಟಲೇರಿ ಕೇಳುತ್ತ ಅವಳ ಕಣ್ಣುಗಳನ್ನು ದಿಟ್ಟಿಸಿದ.

'ಸರ್ಟನ್‌ಲೀ, ಸಂತೋಷ್, ನನ್ನನ್ನು ಯಾರೇ ಅಪಹರಿಸಿದರೂ ಏನೇ ಮಾಡಿದರೂ ಯಾರೂ ಕೇಳುವವರಿಲ್ಲ. ಅವಳ ಬಟ್ಟಲುಗಣ್ಣುಗಳಲ್ಲಿ ನೀರು ತುಂಬಿದವು. ಅವನು ಹಾಗೆಯೇ ಅವಳನ್ನು ಬಳಸಿ ಹಿಡಿದು ಎದೆಗೊತ್ತಿಕೊಂಡ. ಕವಿತಾಗೆ ಇದು ತಾನಲ್ಲ ಎನಿಸತೊಡಗಿತು. ಯಾಕೋ ತನಗೆ ಹುಚ್ಚು ಹಿಡಿಯುತ್ತಿದೆ ಎನಿಸಿತು. ದೂರ ಸರಿದು ಕುಳಿತು ಕರ್ಚೀಫಿನಿಂದ ಕಣ್ಣೊರೆಸಿಕೊಂಡಳು.

ಮಾರನೆಯ ದಿನ ಬೆಳಿಗ್ಗೆ ಏಳುಗಂಟೆಗೆ ಶಿವಾಲಯದ ಗರ್ಭಗುಡಿಯ ಮುಂದೆ ಇಬ್ಬರೂ ಕೈಜೋಡಿಸಿಕೊಂಡು ನಿಂತಿದ್ದರು. ಯಾವುದೋ ನಿರ್ಧಾರ ಅವಳಲ್ಲಿ ರೂಪುಗೊಂಡಂತಿತ್ತು. ಪೂಜಾರಿ ತೆಂಗು ಒಡೆದು ಹೂವು ಮಿಠಾಯಿಗಳೊಂದಿಗೆ ಪ್ರಸಾದವಾಗಿ ಅವಳ ಬೊಗಸೆಗೆ ನೀಡಿದ.

ಇಬ್ಬರೂ ಮೆಟ್ಟಿಲಿಳಿದು ನದಿಯಂಚಿಗೆ ನಡೆದು ಬಂದರು. ಹರಿವ ನೀರಲ್ಲಿ ರವಿಯ ಎಳೆ ಕಿರಣಗಳು ಸಾವಿರ ಬಣ್ಣಗಳಲ್ಲಿ ಥಳಥಳಿಸುತ್ತಿದ್ದವು. ಅವನ ಕೈಹಿಡಿದುಕೊಂಡು ಬಂಡೆಯಿಂದ ಬಂಡೆಗೆ ನಡೆದು ಬಂದಳು. ಆಲದ ಮರದಡಿಯಲ್ಲಿ ಕುಳಿತು ಮಾತನಾಡಿದರು. ಪ್ರಸಾದದ ಹೂವನ್ನು ಸಂತೋಷ ಅವಳ ಜಡೆಯಲ್ಲಿಟ್ಟ. ಮಿಠಾಯಿಯ ತುಣುಕನ್ನು ಅವಳು ಅವನ ಬಾಯಿಗಿಟ್ಟಳು. ಅವಳ ಅತೃಪ್ತ ದಾಂಪತ್ಯದ ಸುಳಿವನ್ನು ಅವನು ಎಂದೋ ಅರಿತಿದ್ದ. ಅವಳು ಬಯಸಿದರೆ ಕಾರ್ತಿಕ ಅವಳನ್ನು ಖಂಡಿತವಾಗಿ ತನಗೊಪ್ಪಿಸವನೆಂಬ ವಿಷಯ ಅವಳ ಬಾಯಿಂದಲೇ ತಿಳಿದು ಅವಿವಾಹಿತ ಸಂತೋಷ್ ಸಂತಸದ ಶಿಖರವೇರಿದ್ದ. 'ನಾನು ನಿಮ್ಮನ್ನು ತುಂಬಾ ಪ್ರೀತಿಸ್ತಿದ್ದೀನಿ ಕವಿತಾ. ನೀವು ಕಳಕೊಂಡಿರೋ ಸುಖಾನ ನಾನು ನಿಮಗೆ ಕೊಡ್ತೀನಿ' ಎಂದು ಪ್ರಾಮಾಣಿಕವಾಗಿ ಹೃದಯ ತೋಡಿಕೊಂಡು ಅವಳ ಕೈಮೇಲೆ ಕೈಯಿಟ್ಟ. ಅವಳ ಬೆಂದ ಹೃದಯ ತಂಪಾಯ್ತು. ಎದೆಯಲ್ಲಿ ನಿಶ್ಚಲವಾಗಿದ್ದ ತಾಯಿಯಾಗುವ ಹಂಬಲ ಮಿಸುಕಾಡಿ ಧ್ವನಿ ಹೊರಡಿಸಿತು. ಅವನ ವಿಶಾಲವಾದ ಎದೆಯ ಆಸರೆಯಲ್ಲಿ ತಾನು ತುಂಬ ಸುಖವಾಗಿರಬಲ್ಲೆನೆಂಬ ಭರವಸೆಯ ಅನಿಸಿಕೆ ಅವಳಿಗೆ ಧೈರ್ಯ ತುಂಬಿತು. 'ನಾನು ನಾಳೆಯೇ